2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 10/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಅಬ್ದುಲ್ ಸಗೀ | ಪಿಡಬ್ಲೂ -2 |
| ತಂದೆಯ ಹೆಸರು | - | ಅಬ್ದುಲ್ ಸುಬಾನ್ | ಸಿಡಬ್ಲೂ -2 |
| ವಯಸ್ಸು | - | 37 ವರ್ಷ | |
| ಉದ್ಯೋಗ | - | ಚಾಲಕ | |
| ವಾಸ ಸ್ಥಳ | - | ಅಜ್ಜಂಪುರ | |

ದಿನಾಂಕಃ 03.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಫ್ರಾಸಾ.1 ಗೊತ್ತು, ಆಕೆ ನನ್ನ ಹೆಂಡತಿಯ ಅಕ್ಕ. ಮೃತ ತಬಾರಕ್ ಬಾನು ಫ್ರಾಸಾ.1 ರವರ ಮಗಳು. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು, ಸದರಿ ತಬಾರಕ್ ಬಾನುರವರ ಗಂಡ. ಚಾಸಾ.3, ಚಾಸಾ.5, ಚಾಸಾ.6 ನನ್ನ ಸ್ನೇಹಿತರು. ಚಾಸಾ.4 ರವರು ಫ್ರಾಸಾ.1 ರವರ ಗಂಡ. ಚಾಸಾ.7 ನನ್ನ ಅಳಿಯ. ಚಾಸಾ.8 ಗೊತ್ತು. ಚಾಸಾ.9 ಮತ್ತು ಚಾಸಾ.10 ನನ್ನ ಸಂಬಂಧಿಕರು. ಚಾಸಾ.12 ರವರು ಫ್ರಾಸಾ.1 ರವರ ತಮ್ಮ. ಚಾಸಾ.14 ರವರು ಫ್ರಾಸಾ.1 ರವರ ತಾಯಿ. ಚಾಸಾ.16 ರವರು ಗೊತ್ತು ಅವರು ಗೌರಾಪುರ ಗ್ರಾಮದ ಜಾಮಿಯಾ ಮಸೀದಿಯ ಅಧ್ಯಕ್ಷರು. ಚಾಸಾ.17 ಗೊತ್ತು, ಅವರು ಮೃತೆ ಮತ್ತು 1 ನೇ ಆರೋಪಿ ವಾಸವಿದ್ದ ಮನೆಯ ಮಾಲೀಕರು.

2. ಫ್ರಾಸಾ.1 ರವರ ಮಗಳಾದ ತಬಾರಕ್ ಬಾನು ಈಗ್ಗೆ 4

ವರ್ಷಗಳ ಹಿಂದೆ ಮೃತ ಪಟ್ಟಿದ್ದಾಳೆ. ಆಕೆ ಮೃತಪಡುವ 1-2 ವರ್ಷಗಳ ಹಿಂದೆ ಆಕೆಯ ಮದುವೆಯನ್ನು 1 ನೇ ಆರೋಪಿಯೊಂದಿಗೆ ಹಿರಿಯರು ನಿಶ್ಚಯಿಸಿ ನೆರವೇರಿಸಿದ್ದರು. 1 ನೇ ಆರೋಪಿ ಬಾಣಾವಾರದ ವಾಸಿ. ಮದುವೆಯಾದ ಬಳಿಕ ತಬಾರಕ್ ಬಾನು 1 ನೇ ಆರೋಪಿಯೊಂದಿಗೆ ಬಾಣಾವಾರದಲ್ಲಿ ಸ್ವಲ್ಪ ದಿನ ವಾಸವಾಗಿದ್ದಳು, ನಂತರ ಫ್ರಾಸಾ.1 ರವರು 1 ನೇ ಆರೋಪಿ ಮತ್ತು ತಬಾರಕ್ ಬಾನುರವರಿಗೆ ಅಜ್ಜಂಪುರದ ಅಂಬೇಡ್ಕರ್ ಬಡಾವಣೆಯಲ್ಲಿ ಒಂದು ಮನೆಯನ್ನು ಬಾಡಿಗೆಗೆ ಹಾಕಿಸಿಕೊಟ್ಟಿದ್ದರು. ಆ ಸಮಯದಲ್ಲಿ 1 ನೇ ಆರೋಪಿ ಮತ್ತು ತಬಾರಕ್ ಬಾನು ಸ್ವಲ್ಪ ದಿನ ಚೆನ್ನಾಗಿ ಇದ್ದರು. ನಂತರ 1 ನೇ ಆರೋಪಿ ಫ್ರಾಸಾ.1 ಮತ್ತು ಆಕೆಯ ಗಂಡನನ್ನು ಕುರಿತು ಆಟೋವನ್ನು ಕೊಡಿಸಿ ಎಂದು ಕೇಳುತ್ತಿದ್ದನು. ನಾನು ಅಜ್ಜಂಪುರದ ಮಸೀದಿಯ ಅಧ್ಯಕ್ಷನಾಗಿದ್ದೆನು. ಹಾಗಾಗಿ ಫ್ರಾಸಾ.1 ರವರು ನಮ್ಮ ಮನೆಗೆ ಬಂದಾಗ ಆ ವಿಚಾರವನ್ನು ನನಗೆ ಹೇಳುತ್ತಿದ್ದರು.

3. ಅಂಬೇಡ್ಕರ್ ಬಡಾವಣೆಯಲ್ಲಿರುವ ಚಾಸಾ.17 ಚಂದ್ರಶೇಖರ್ ರವರಿಗೆ ಸೇರಿದ 1 ನೇ ಆರೋಪಿ ಮತ್ತು ತಬಾರಕ್ ಬಾನುರವರು ಬಾಡಿಗೆಗೆ ವಾಸವಿದ್ದ ಮನೆಯಲ್ಲಿ ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ತಬಾರಕ್ ಬಾನು ಮೃತಪಟ್ಟಿದ್ದಳು. ಆಗ ನಾನು ನಮ್ಮ ಮನೆಯಲ್ಲಿ ಇದ್ದೆನು. ಆಗ ವಸೀಮುಲ್ಲಾ ರವರು ನನಗೆ ಫೋನ್ ಮಾಡಿ ತಬಾರಕ್ ಬಾನು ಅವರ ಮನೆಯಲ್ಲಿ ಬಿದ್ದಿದ್ದಾಳೆ ಹೋಗಿ ನೋಡಿ ಎಂದು ಹೇಳಿದರು. ಆದರೆ ನಾನು ಆಗ ಅಲ್ಲಿಗೆ ಹೋಗಲಿಲ್ಲ.

ನಂತರ ತಬಾರಕ್ ಬಾನುವಿಗೆ ಬಿಪಿ ಲೋ ಆಗಿದೆ ಎಂದು ಹೇಳಿ ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸದರಿ ಆಸ್ಪತ್ರೆಯ ನರ್ಸ್ ಆಕೆಯನ್ನು ಪರೀಕ್ಷಿಸಿ ಆಕೆ ಮೃತಪಟ್ಟಿರುವುದಾಗಿ ತಿಳಿಸಿದರು. ನಂತರ ಆಕೆಯ ಶವವನ್ನು ಗೌರಾಪುರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ನಮ್ಮ ಜನಾಂಗಕ್ಕೆ ಸೇರಿದ ಸಶ್ಮಾನದಲ್ಲಿ ಆಕೆಯನ್ನು ದಫನ್ ಮಾಡಲಾಯಿತು.

4. ನಂತರ 1 ನೇ ಆರೋಪಿ ತನ್ನ ಊರಿಗೆ ಹೊರಟು ಹೋದನು. 1 ನೇ ಆರೋಪಿ ಮತ್ತು ತಬಾರಕ್ ಬಾನುರವರ ಆಗ್ಗೆ 7-8 ತಿಂಗಳು ವಯಸ್ಸಾಗಿದ್ದ ಹೆಣ್ಣು ಮಗುವನ್ನು ಫ್ರಾಸಾ.1 ರವರು ತಮ್ಮೊಂದಿಗೆ ತಮ್ಮ ಮನೆಗೆ ಕರೆದುಕೊಂಡು ಹೋದರು. ಅದಾದ 2-3 ತಿಂಗಳ ಬಳಿಕ ಅಜ್ಜಂಪುರ ಪೊಲೀಸರು ಮಹಜರ್ ಗೆಂದು ಅಜ್ಜಂಪುರದ ಅಂಬೇಡ್ಕರ್ ಬಡಾವಣೆಯಲ್ಲಿ ಚಾಸಾ.17 ರವರ ಮನೆಯಲ್ಲಿ 1 ನೇ ಆರೋಪಿ ಮತ್ತು ತಬಾರಕ್ ಬಾನುರವರು ಬಾಡಿಗೆಗೆ ವಾಸವಿದ್ದ ಮನೆಗೆ ಕರೆದಿದ್ದರು.

5. ಅದರಂತೆ ನಾನು ಅಲ್ಲಿಗೆ ಹೋಗಿದ್ದೆನು. ಆಗ ಫ್ರಾಸಾ.1 ಮತ್ತು ಚಾಸಾ.3 ರವರು ಅಲ್ಲಿಗೆ ಬಂದಿದ್ದರು. ಅಲ್ಲಿ ಪೊಲೀಸರಿಗೆ ಫ್ರಾಸಾ.1 ರವರು ಮೊದಲನೇ ಮಹಡಿಯಲ್ಲಿದ್ದ ಮನೆಯನ್ನು ತೋರಿಸಿ ತಬಾರಕ್ ಬಾನು ಮೃತಪಟ್ಟ ಸ್ಥಳ ಅದೇ ಎಂದು ತಿಳಿಸಿದರು. ಅಲ್ಲಿ ಪೊಲೀಸರು ಮಹಜರ್ ಮಾಡಿಕೊಂಡರು. ಅದಕ್ಕೆ ನಾನು, ಫ್ರಾಸಾ.1 ಮತ್ತು ಚಾಸಾ.3 ರವರು ಸಹಿ ಮಾಡಿದ್ದೇವೆ. ಬೆಳಿಗ್ಗೆ 8.30 ಗಂಟೆಯಿಂದ 10.00

ಗಂಟೆಯವರೆಗೆ ಪೊಲೀಸರು ಸದರಿ ಪಂಚನಾಮೆಯನ್ನು ಜರುಗಿಸಿದರು. ಸಾಕ್ಷಿಯು ಈಗಾಗಲೇ ನಿಪಿ.3 ಎಂದು ಗುರುತಿಸಲ್ಪಟ್ಟಿರುವ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು.

6. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ನಿಪಿ.3 ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸಾಗಿದ್ದು ಅದನ್ನು ನಿಪಿ.5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

7. ಸಾಕ್ಷಿಯು ಈಗಾಗಲೇ ನಿಪಿ.4 ಎಂದು ಗುರುತಿಸಲ್ಪಟ್ಟಿರುವ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಸದರಿ ಫೋಟೋವನ್ನು ಮೇಲೆ ಹೇಳಿದಂತೆ ನಿಪಿ.3 ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಪೊಲೀಸರು ತೆಗೆದುಕೊಂಡಿದ್ದಾಗಿ ಮತ್ತು ಅದರಲ್ಲಿ ತನ್ನೊಂದಿಗೆ ಪ್ರಾಸಾ.1, ಚಾಸಾ.3 ಮತ್ತು ಪೊಲೀಸರು ಇರುವುದಾಗಿ ನುಡಿದಿರುತ್ತಾರೆ.

8. 2019 ನೇ ಇಸವಿ 4 ನೇ ತಿಂಗಳಿನಲ್ಲಿ ಪೊಲೀಸರು ಗೌರಾಪುರದಲ್ಲಿರುವ ಮುಸಲ್ಮಾನರ ಸ್ಮಶಾನಕ್ಕೆ ನನ್ನನ್ನು ಕರೆಸಿದ್ದರು. ಆಗ ಚಾಸಾ.4 ಮತ್ತು ಚಾಸಾ.5 ರವರು ಇದ್ದರು.

ಅಲ್ಲಿಗೆ ಎಸಿ ಮೇಡಮ್, ಡಿವೈಎಸ್ ಪಿ ಮತ್ತು ಪಿ ಎಸ್ ಐ ರವರು ಬಂದಿದ್ದರು. ಅಲ್ಲಿ ಚಾಸಾ.4 ರವರು ತಬಾರಕ್ ಬಾನುರವರನ್ನು ದಫನ್ ಮಾಡಿದ್ದ ಸ್ಥಳವನ್ನು ನಮಗೆ ತೋರಿಸಿದರು. ಸದರಿ ಸ್ಥಳದಲ್ಲಿ ತಬಾರಕ್ ಬಾನುರವರನ್ನು ದಫನ್ ಮಾಡಲಾಗಿದ್ದ ಸ್ಥಳದಲ್ಲಿ ನೆಡಲಾಗಿದ್ದ ಕಲ್ಲನ್ನು ತೋರಿಸಿ ಸದರಿ ಸ್ಥಳದಲ್ಲಿಯೇ ತಬಾರಕ್ ಬಾನುರವರನ್ನು ದಫನ್ ಮಾಡಿದ್ದಾಗಿ ಚಾಸಾ.4 ರವರು ನಮಗೆ ತಿಳಿಸಿದರು. ಸದರಿ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸಿದರು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ.

9. ಸಾಕ್ಷಿಯು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿಪಿ.6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

10. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಪೊಲೀಸರು ಮೇಲೆ ಹೇಳಿದಂತೆ ತಬಾರಕ್ ಬಾನು ರವರನ್ನು ದಫನ್ ಮಾಡಿದ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಜರುಗಿಸುವಾಗ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಶವಪಂಚನಾಮೆಗೆ ಸಹಕರಿಸುವಂತೆ

ಪೊಲೀಸರು ಸಾಕ್ಷಿಗೆ ನೀಡಿದ್ದಾರೆ ಎಂದು ಹೇಳಲಾದ ನೋಟೀಸಾಗಿದ್ದು ಅದನ್ನು ನಿಪಿ.8 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

12. ಆ ಸಮಯಕ್ಕೆ ಮುನಿಸಿಪಾಲಿಟಿಯಿಂದ ಇಬ್ಬರು ಕೆಲಸದವರು ಬಂದಿದ್ದರು. ಎ ಸಿ ಮೇಡಮ್ ರವರ ಆದೇಶದ ಮೇರೆಗೆ ಸದರಿ ಕೆಲಸಗಾರರು ಮತ್ತು ನಾವು ಸೇರಿ ಶವವನ್ನು ಮೇಲೆ ತೆಗೆದು ಒಂದು ಟೇಬಲ್ ಮೇಲೆ ಇರಿಸಿದೆವು. ಸದರಿ ಶವ ಕೊಳೆತ ಸ್ಥಿತಿಯಲ್ಲಿ ಇತ್ತು, ಅದರ ಸುತ್ತ ಬಿಳಿಯ ಬಟ್ಟೆಯನ್ನು ಸುತ್ತಲಾಗಿತ್ತು. ಅಲ್ಲಿಗೆ ಅಜ್ಜಂಪುರ ಸರ್ಕಾರಿ ಆಸ್ಪತ್ರೆಯಿಂದ ವೈದ್ಯರು ಬಂದಿದ್ದರು. ಅವರು ಸದರಿ ಶವವನ್ನು ಪರೀಕ್ಷಿಸಿದರು. ತಬಾರಕ್ ಬಾನುಳ ಶವವನ್ನು ನಾವೇ ದಫನ್ ಮಾಡಿದ್ದೆವು ಮತ್ತು ಆಕೆಯ ತಂದೆಯು ನಮ್ಮ ಜೊತೆ ಇದ್ದರು, ನಾವು ಸದರಿ ಶವ ತಬಾರಕ್ ಬಾನುಳದ್ದು ಎಂದು ಗುರುತಿಸಿದೆವು. ಆ ಸಮಯದಲ್ಲಿ 1 ನೇ ಆರೋಪಿ ಮತ್ತು ಆತನ ತಮ್ಮ ಮತ್ತು ತಾಯಿ ಸೇರಿ ಆಟೋ ತರಲು 50,000/- ಹಣವನ್ನು ಕೊಡಲಿಲ್ಲವೆಂದು 1 ನೇ ಆರೋಪಿ ತಬಾರಕ್ ಬಾನುರವರಿಗೆ ಹೊಡೆದು ಸಾಯಿಸಿ ನಂತರ ತನ್ನ ತಮ್ಮನೊಂದಿಗೆ ಸೇರಿ ಆಕೆಯನ್ನು ಅವರ ಮನೆಯಲ್ಲಿದ್ದ ಫ್ಯಾನಿನ ಕೊಕ್ಕೆಗೆ ವೇಲಿನಿಂದ ನೇತು ಹಾಕಿ ನಂತರ ಆಕೆಯ ಶವವನ್ನು ಕೆಳಗೆ ಇಳಿಸಿ ಫ್ರಾಸಾ.1 ರವರಿಗೆ ಫೋನ್ ಮಾಡಿ ನಿಮ್ಮ ಮಗಳು ಪ್ರಜ್ಞೆ ತಪ್ಪಿ ಬಿದ್ದಿದ್ದಾಳೆ ಎಂದು ಹೇಳಿ ಅವರನ್ನು ಕರೆಸಿಕೊಂಡಿದ್ದಾಗಿ ಮೊದಲು ಪಿ ಎಸ್ ಐ ರಫೀಕ್ ರವರಿಂದ

ನನಗೆ ತಿಳಿಯಿತು ಎಂದು ಸಾಕ್ಷಿ ನುಡಿದು ನಂತರ ಫ್ರಾಸಾ.1 ರವರ ತಮ್ಮನಾದ ಅಕ್ಬರ್ ಅಲಿ ರವರಿಂದ ನನಗೆ ಆ ವಿಚಾರ ತಿಳಿಯಿತು ಎನ್ನುತ್ತಾರೆ.

13. ನಂತರ ಪಿ ಎಸ್ ಐ ರಫೀಕ್ ರವರು ನನ್ನನ್ನು ಆ ಬಗ್ಗೆ ವಿಚಾರಿಸಿದರು ಆಗ ನಾನು ಅವರಿಗೆ ಮೇಲೆ ಹೇಳಿದಂತೆ ಅಕ್ಬರ್ ಅಲಿ ರವರಿಂದ ನನಗೆ ತಿಳಿದ ವಿಚಾರವನ್ನು ತಿಳಿಸಿರುತ್ತೇನೆ. ಆ ಬಗ್ಗೆ ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಪೊಲೀಸರು ನನ್ನ, ಚಾಸಾ.5 ಮತ್ತು ಇನ್ನೊಬ್ಬರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದರು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ.9 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

14. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳನ್ನು ಮೇಲೆ ಹೇಳಿದಂತೆ ತಬಾರಕ್ ಬಾನುರವರ ಶವವನ್ನು ಊತಿದ್ದ ಸ್ಥಳದಿಂದ ಹೊರತೆಗೆದಾಗ ಪೊಲೀಸರು ಪಂಚನಾಮೆಯನ್ನು ಮಾಡಿಕೊಂಡ ಸಮಯದಲ್ಲಿ ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.10 ಮತ್ತು ನಿಪಿ.11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

15. ನಿಪಿ.3 ಪಂಚನಾಮೆಯನ್ನು ಜರುಗಿಸಿದ ದಿನಾಂಕ 18.10.2019 ಮತ್ತು ಸಮಯ ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆ ಎಂದರೆ ಸರಿ. ನಿಪಿ.6 ಪಂಚನಾಮೆಯನ್ನು ಜರುಗಿಸಿದ ದಿನಾಂಕ 02.11.2019 ಮತ್ತು ಸಮಯ ಬೆಳಿಗ್ಗೆ 10.45 ಗಂಟೆಯಿಂದ 11.45 ಗಂಟೆ ಎಂದರೆ ಸರಿ. ನಿಪಿ.9 ಪಂಚನಾಮೆಯನ್ನು ಜರುಗಿಸಿದ ದಿನಾಂಕ 02.11.2019 ಮತ್ತು ಸಮಯ ಮಧ್ಯಾಹ್ನ 12.00 ಗಂಟೆಯಿಂದ 2.00 ಗಂಟೆ ಎಂದರೆ ಸರಿ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.